# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** 1) ಶ್ರೀಮತಿ ಗುರಬಾಯಿ ಸುರೇಶ ಹುಕ್ಕೇರಿ, ಅಧ್ಯಕ್ಷರು, 2) ಶ್ರೀಮತಿ ಭಾರತಿ ಸಿದ್ದಪ್ಪ ಕಾಮತ್, ಉಪಾಧ್ಯಕ್ಷರು, 3) ಶ್ರೀ ಹುಸೇನ ಅಮೀನಸಾಬ ಮೋಕಸೆ, ಸದಸ್ಯರು, 4) ಶ್ರೀ ಈರಪ್ಪ ಶಿವಪ್ಪ ಸಾರವಾಡ, ಸದಸ್ಯರು, 5) ಶ್ರೀ ಬಸಪ್ಪ ತುಕ್ಕಪ್ಪ ಕಾಖಂಡಕಿ, ಸದಸ್ಯರು, 6) ಶ್ರೀಮತಿ ಸರೋಜನಿ ರವೀಂದ್ರ ಕಾಲೇಬಾಗ, ಸದಸ್ಯರು, 7) ಶ್ರೀ ಐನುದ್ದಿನ ಅಬ್ದುಲ ಜಮಾದಾರ, ಸದಸ್ಯರು, 8) ಶ್ರೀ ಚಿದಾನಂದ ದುಂಡಪ್ಪ ಪೂಜಾರಿ, ಸದಸ್ಯರು, 9) ಶ್ರೀಮತಿ ಕಸ್ತೂರಿ ಈರಪ್ಪ ತೋಡಕರ, ಸದಸ್ಯರು, 10) ಶ್ರೀಮತಿ ಭಾರತಿ ಮಾದೇವ ಮೂಡಲಗಿ, ಸದಸ್ಯರು ಮತ್ತು 11) ಶ್ರೀ ದುಂಡಪ್ಪ ಮರೆಪ್ಪ ಕಾಂಬಳೆ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ ರವರ ಪತ್ರ ಸಂಖ್ಯೆ: ಜಿಪಂಆ/ಗ್ರಾಪಂ/ಸಿಬ್ಬಂದಿ-3/ಸಿಆರ್-48/2017-18/661, ದಿನಾಂಕ 31.05.2017
2. ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 22.07.2017
3. ಶ್ರೀಮತಿ ಗುರಬಾಯಿ ಸುರೇಶ ಹುಕ್ಕೇರಿ, ಅಧ್ಯಕ್ಷರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
4. ಶ್ರೀಮತಿ ಭಾರತಿ ಸಿದ್ದಪ್ಪ ಕಾಮತ್, ಉಪಾಧ್ಯಕ್ಷರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
5. ಶ್ರೀ ಹುಸೇನ ಅಮೀನಸಾಬ ಮೋಕಸೆ, ಸದಸ್ಯರು. ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
6. ಶ್ರೀ ಈರಪ್ಪ ಶಿವಪ್ಪ ಸಾರವಾಡ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
7. ಶ್ರೀ ಬಸಪ್ಪ ತುಕ್ಕಪ್ಪ ಕಾಖಂಡಕಿ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
8. ಶ್ರೀಮತಿ ಸರೋಜನಿ ರವೀಂದ್ರ ಕಾಲೇಬಾಗ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
9. ಶ್ರೀ ಐನುದ್ದಿನ ಅಬ್ದುಲ ಜಮಾದಾರ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
10. ಶ್ರೀ ಚಿದಾನಂದ ದುಂಡಪ್ಪ ಪೂಜಾರಿ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
11. ಶ್ರೀಮತಿ ಕಸ್ತೂರಿ ಈರಪ್ಪ ತೋಡಕರ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
12. ಶ್ರೀಮತಿ ಭಾರತಿ ಮಾದೇವ ಮೂಡಲಗಿ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
13. ಶ್ರೀ ದುಂಡಪ್ಪ ಮರೆಪ್ಪ ಕಾಂಬಳೆ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಇವರು ಸಲ್ಲಿಸಿರುವ ಆಕ್ಷೇಪಣೆಗಳು, ದಿನಾಂಕ 03.08.2017
14. ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ 28.08.2017, ವಿಚಾರಣೆ ನಡೆದ ದಿನಾಂಕ 05.09.2017

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ ವಿಜಯಪುರ ತಾಲ್ಲೂಕಿನ ಅರ್ಜುಣಗಿ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ಒಟ್ಟು 11 ಜನರು ಸತತವಾಗಿ ದಿನಾಂಕ 11.08.2016, 27.09.2016, 28.10.2016 ಮತ್ತು 15.11.2016 ರಂದು ನಡೆದ ನಾಲ್ಕು ಸಾಮಾನ್ಯ ಸಭೆಗಳಿಗೆ ಹಾಜರಾಗಿರುವುದಿಲ್ಲ ಹಾಗೂ ಸಭಾ ಸೂಚನಾ ಪತ್ರಗಳನ್ನು ಸಹ ಸ್ವೀಕರಿಸಿರುವುದಿಲ್ಲ, ಹೀಗಾಗಿ ಕೋರಂ ಅಭಾವದಿಂದ ಸಾಮಾನ್ಯ ಸಭೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ ಮತ್ತು ಹಣಕಾಸಿನ ವ್ಯವಹಾರ ನಡೆಸುವುದರ ಬಗ್ಗೆ ಅಧ್ಯಕ್ಷರು ಮಾದರಿ ಸಹಿಗಳನ್ನು ಮಾಡಿಕೊಟ್ಟಿರುವುದಿಲ್ಲದಿರುವುದರಿಂದ ಗ್ರಾಮ ಪಂಚಾಯತಿಯ ಎಲ್ಲ ಕೆಲಸಗಳು ಕುಂಠಿತಗೊಂಡಿರುತ್ತವೆ. ಆದುದರಿಂದ, 1) ಶ್ರೀಮತಿ ಗುರಬಾಯಿ ಸುರೇಶ ಹುಕ್ಕೇರಿ, ಅಧ್ಯಕ್ಷರು, 2) ಶ್ರೀಮತಿ ಭಾರತಿ ಸಿದ್ದಪ್ಪ ಕಾಮತ್, ಉಪಾಧ್ಯಕ್ಷರು, 3) ಶ್ರೀ ಹುಸೇನ ಅಮೀನಸಾಬ ಮೋಕಸೆ, ಸದಸ್ಯರು, 4) ಶ್ರೀ ಈರಪ್ಪ ಶಿವಪ್ಪ ಸಾರವಾಡ, ಸದಸ್ಯರು, 5) ಶ್ರೀ ಬಸಪ್ಪ ತುಕ್ಕಪ್ಪ ಕಾಖಂಡಕಿ, ಸದಸ್ಯರು, 6) ಶ್ರೀಮತಿ ಸರೋಜನಿ ರವೀಂದ್ರ ಕಾಲೇಬಾಗ, ಸದಸ್ಯರು, 7) ಶ್ರೀ ಐನುದ್ದಿನ ಅಬ್ದುಲ ಜಮಾದಾರ, ಸದಸ್ಯರು, 8) ಶ್ರೀ ಚಿದಾನಂದ ದುಂಡಪ್ಪ ಪೂಜಾರಿ, ಸದಸ್ಯರು, 9) ಶ್ರೀಮತಿ ಕಸ್ತೂರಿ ಈರಪ್ಪ ತೋಡಕರ, ಸದಸ್ಯರು, 10) ಶ್ರೀಮತಿ ಭಾರತಿ ಮಾದೇವ ಮೂಡಲಗಿ, ಸದಸ್ಯರು ಮತ್ತು 11) ಶ್ರೀ ದುಂಡಪ್ಪ ಮರೆಪ್ಪ ಕಾಂಬಳೆ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 13(ಸಿ) ಪ್ರಕಾರ ಸದಸ್ಯ ಸ್ಥಾನದಲ್ಲಿ ಉಳಿಯಲು ಅನರ್ಹರಿರುವುದರಿಂದ, ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಗಳು 1993 ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವಂತೆ ಕೋರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಳಗಾವಿ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸತತವಾಗಿ ನಾಲ್ಕು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗಿರುವುದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಅರ್ಜುಣಗಿ ಗ್ರಾಮ ಪಂಚಾಯತಿಯ ಪೋಲ್ಕಂಡ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ (3) ರಿಂದ (13) ರವರೆಗಿನ ಪತ್ರಗಳಲ್ಲಿ ಸದರಿ 11 ಜನ ಚುನಾಯಿತ ಪ್ರತಿನಿಧಿಗಳು ಸರ್ಕಾರಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (14) ರನ್ವಯ ಸರಿ 11 ಜನ ಚುನಾಯಿತ ಪ್ರತಿನಿಧಿಗಳನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ಯವರ ನ್ಯಾಯಾಲಯದಲ್ಲಿ ದಿನಾಂಕ 05.09.2017 ರಂದು ವಿಚಾರಣೆ ಜರುಗಿಸಲಾಗಿ, ಸದರಿ 11 ಜನರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಅಧ್ಯಕ್ಷರ ಸಹಿ ಪಡೆಯದೆ ಸಾಮಾನ್ಯ ಸಭೆಗಳನ್ನು ಜರುಗಿಸಿರುತ್ತಾರೆ, ಕೋರಂ ಇಲ್ಲದ ಕಾರಣ ಸಭೆಗಳನ್ನು ಮುಂದೂಡಲಾಗಿದೆ, ಮುಂದೂಡಲಾದ ಸಭೆಗಳನ್ನು ನಡೆಸಿ ನಂತರ ಸದಸ್ಯರ ಸಹಿಗಳನ್ನು ಪಡೆಯಲಾಗಿದೆ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 52(3) ನ್ನು ಪಾಲಿಸದೆ, ನಿಯಮಬಾಹಿರವಾಗಿ ತಾತ್ಕಾಲಿ ಸಾಮಾನ್ಯ ಸಭೆಗಳನ್ನು ಕರೆದಿರುತ್ತಾರೆ, ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಯವರ ವರದಿಯಲ್ಲಿ ಇದನ್ನೇ ತಿಳಿಸಿರುತ್ತಾರೆ, ಇನ್ನು ಮುಂದೆ ಸಭೆಗಳನ್ನು ನಿಯಮಾನುಸಾರ ನಡೆಸಲಾಗುವುದು ಎಂದು ತಿಳಿಸಿರುತ್ತಾರೆ. ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಸದರಿಯವರಿಗೆ ಇನ್ನು ಮುಂದೆ ನಿಯಮಾನುಸಾರ ಸಾಮಾನ್ಯ ಸಭೆಗಳಿಗೆ ಹಾಜರಾಗಲು ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಕೂಡಲೇ ಸಾಮಾನ್ಯ ಸಭೆಯನ್ನು ಕರೆಯಲು ಹಾಗೂ ಎಲ್ಲಾ ಸದಸ್ಯರು ಅಧಿಕಾರಿಗಳೊಂದಿಗೆ ಸಹಕರಿಸಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಹಕರಿಸುವಂತೆ ತಿಳಿಸಿ, ಸದರಿ 11 ಜನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ಆದೇಶಿಸಿರುತ್ತಾರೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಸದರಿ 11 ಜನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಹೇಳಿಕೆಗಳನ್ನು ಪರಿಶೀಲಿಸಿ, ಇನ್ನು ಮುಂದೆ ನಿಯಮಾನುಸಾರ ಸಾಮಾನ್ಯ ಸಭೆಗಳಿಗೆ ಹಾಜರಾಗಲು ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಕೂಡಲೇ ಸಾಮಾನ್ಯ ಸಭೆಯನ್ನು ಕರೆಯಲು ಹಾಗೂ ಎಲ್ಲಾ ಸದಸ್ಯರು ಅಧಿಕಾರಿಗಳೊಂದಿಗೆ ಸಹಕರಿಸಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಹಕರಿಸುವಂತೆ ತಿಳಿಸಿ, ಸದರಿಯವರಿಗೆ ಎಚ್ಚರಿಕೆ ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 48(4) ಮತ್ತು 43(ಎ) ರಂತೆ ಪ್ರಾರಂಭಿಸಿರುವ ವಿಚಾರಣೆಯನ್ನು ಕೈಬಿಡಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 386 ಗ್ರಾಪಂಅ 2017 ಬೆಂಗಳೂರು, ದಿನಾಂಕ: 19.10.2017**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, 1) ಶ್ರೀಮತಿ ಗುರಬಾಯಿ ಸುರೇಶ ಹುಕ್ಕೇರಿ, ಅಧ್ಯಕ್ಷರು, 2) ಶ್ರೀಮತಿ ಭಾರತಿ ಸಿದ್ದಪ್ಪ ಕಾಮತ್, ಉಪಾಧ್ಯಕ್ಷರು, 3) ಶ್ರೀ ಹುಸೇನ ಅಮೀನಸಾಬ ಮೋಕಸೆ, ಸದಸ್ಯರು, 4) ಶ್ರೀ ಈರಪ್ಪ ಶಿವಪ್ಪ ಸಾರವಾಡ, ಸದಸ್ಯರು, 5) ಶ್ರೀ ಬಸಪ್ಪ ತುಕ್ಕಪ್ಪ ಕಾಖಂಡಕಿ, ಸದಸ್ಯರು, 6) ಶ್ರೀಮತಿ ಸರೋಜನಿ ರವೀಂದ್ರ ಕಾಲೇಬಾಗ, ಸದಸ್ಯರು, 7) ಶ್ರೀ ಐನುದ್ದಿನ ಅಬ್ದುಲ ಜಮಾದಾರ, ಸದಸ್ಯರು, 8) ಶ್ರೀ ಚಿದಾನಂದ ದುಂಡಪ್ಪ ಪೂಜಾರಿ, ಸದಸ್ಯರು, 9) ಶ್ರೀಮತಿ ಕಸ್ತೂರಿ ಈರಪ್ಪ ತೋಡಕರ, ಸದಸ್ಯರು, 10) ಶ್ರೀಮತಿ ಭಾರತಿ ಮಾದೇವ ಮೂಡಲಗಿ, ಸದಸ್ಯರು ಮತ್ತು 11) ಶ್ರೀ ದುಂಡಪ್ಪ ಮರೆಪ್ಪ ಕಾಂಬಳೆ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರುಗಳಿಗೆ ಇನ್ನು ಮುಂದೆ ನಿಯಮಾನುಸಾರ ಸಾಮಾನ್ಯ ಸಭೆಗಳಿಗೆ ಹಾಜರಾಗಲು, ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಕೂಡಲೇ ಸಾಮಾನ್ಯ ಸಭೆಯನ್ನು ಕರೆಯಲು ಹಾಗೂ ಎಲ್ಲಾ ಸದಸ್ಯರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಹಕರಿಸಿ ನಿಯಮಾನುಸಾರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಹಕರಿಸುವಂತೆ ತಿಳಿಸಿ, ಎಚ್ಚರಿಕೆ ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರಂತೆ ಪ್ರಾರಂಭಿಸಿರುವ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

*(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್),*
*ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರಿಂದ ಅನುಮೋದಿತ)*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/10/17

**(ಮುಬಾರಕ್ ಅಹ್ಮದ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ.
2. ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ತಾಲ್ಲೂಕು ಪಂಚಾಯತಿ, ವಿಜಯಪುರ.
3. ಶ್ರೀಮತಿ ಗುರಬಾಯಿ ಸುರೇಶ ಹುಕ್ಕೇರಿ, ಅಧ್ಯಕ್ಷರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
4. ಶ್ರೀಮತಿ ಭಾರತಿ ಸಿದ್ದಪ್ಪ ಕಾಮತ್, ಉಪಾಧ್ಯಕ್ಷರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
5. ಶ್ರೀ ಹುಸೇನ ಅಮೀನಸಾಬ ಮೋಕಸೆ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
6. ಶ್ರೀ ಈರಪ್ಪ ಶಿವಪ್ಪ ಸಾರವಾಡ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
7. ಶ್ರೀ ಬಸಪ್ಪ ತುಕ್ಕಪ್ಪ ಕಾಖಂಡಕಿ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
8. ಶ್ರೀಮತಿ ಸರೋಜನಿ ರವೀಂದ್ರ ಕಾಲೇಬಾಗ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ.&ಜಿಲ್ಲೆ.

9. ಶ್ರೀ ಐನುದ್ದಿನ ಅಬ್ದುಲ ಜಮಾದಾರ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
10. ಶ್ರೀ ಚಿದಾನಂದ ದುಂಡಪ್ಪ ಪೂಜಾರಿ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
11. ಶ್ರೀಮತಿ ಕಸ್ತೂರಿ ಈರಪ್ಪ ತೋಡಕರ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
12. ಶ್ರೀಮತಿ ಭಾರತಿ ಮಾದೇವ ಮೂಡಲಗಿ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
13. ಶ್ರೀ ದುಂಡಪ್ಪ ಮರೆಪ್ಪ ಕಾಂಬಳೆ, ಸದಸ್ಯರು, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
14. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅರ್ಜುಣಗಿ ಗ್ರಾಮ ಪಂಚಾಯತಿ, ವಿಜಯಪುರ ತಾ. & ಜಿಲ್ಲೆ.
15. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
16. ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.